(ಸಾಕ್ಷಿಯು ತಾನು ಉರ್ದು ಭಾಷಕನಾಗಿದ್ದು ಕನ್ನಡ ಭಾಷೆ ಬರುವುದಿಲ್ಲ ಎಂದು ನುಡಿಯುತ್ತಾರೆ. ಆದ್ದರಿಂದ ಶ್ರೀ ಎಸ್ ಎ ಕಠಾರೆ, ವಕೀಲರು ಆಳಂದ ಕನ್ನಡ ಮತ್ತು ಉರ್ದು ಭಾಷೆ ಬಲ್ಲವರಾಗಿದ್ದರಿಂದ ಅವರನ್ನ ತುರ್ಜುಮೆದಾರರಾಗಿ ನೇಮಿಸಲಾಯಿತು.)

**(ಇಂದು ದಿಃ 26.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)**

ಮುಂದುವರೆದ ಪಾಟೀ ಸವಾಲು ಃ- ಶ್ರೀ ಬಿ ಎ ಡಿ ವಕೀಲರಿಂದ ವಾದಿ ಪರಃ-

ಓ ಎಸ್ ನಂಬರ್ 51/2021 ರ ನ್ಯಾಯಾಲಯದ ಶುಲ್ಕವನ್ನು ನನ್ನ ಗಂಡ ಕಟ್ಟಿರುತ್ತಾರೆ. ಸದರಿ ಹಣವನ್ನು ಮರಳಿ ಪಡೆಯಲಾಗಿದೆಯೋ, ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ಹಣವನ್ನು ನನಗೆ ನೀಡಲಾಗಿಲ್ಲ. ಸದರಿ ದಾವೆಯಲ್ಲಿ ರಾಜೀಯಾಗಲು ನಾನು ಮತ್ತು ನನ್ನ ಗಂಡ ಮಾತ್ರ ಹೋಗಿದ್ದೇವು. ನನ್ನ ಮತ್ತು ನನ್ನ ಗಂಡನ ನಡುವೆ ರಾಜೀಗಾಗಿ ಮಾತುಕತೆ ನಾವಿಬ್ಬರೇ ಮಾಡಿಕೊಂಡಿದ್ದೇವು. ಸದರಿ ರಾಜೀ ಅರ್ಜಿಯ ಸಂಗತಿಗಳು ನನಗೆ ಗೊತ್ತಿಲ್ಲ. ನ್ಯಾಯಾಧೀಶರು ರಾಜೀಯ ಸಂಗತಿಗಳು ಒಪ್ಪಿಗೆ ಇದೆಯೋ, ಇಲ್ಲವೋ ನನಗೆ ಕೇಳಿದರು. ಸದರಿ ರಾಜೀ ಅರ್ಜಿಯ ಸಂಗತಿಗಳು ನನಗೆ ತಿಳಿಯದೇ ಇರುವುದರಿಂದ ಓದಿ ಹೇಳಲು ನಾನು ನ್ಯಾಯಾಧೀಶರಿಗೆ ಕೇಳಿರುವುದಿಲ್ಲ. ಸದರಿ ಡಿಕ್ರಿಯ ಪ್ರತಿಯನ್ನು ನಾನು ಪಡೆದಿರುತ್ತೇನೆ. ಸದರಿ ರಾಜೀ ಅರ್ಜಿಯನ್ನು ಅಮಲ ಜಾರಿ ಮಾಡಲು ನಾನು ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ನನ್ನ ಗಂಡನ ಮೊದಲನೇಯ ಹೆಂಡತಿಯ ಮಕ್ಕಳ ಸಮ್ಮತಿಯನ್ನು ನಾನು ಕೇಳಿರುವುದಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ವಾದಿಯರು ನನ್ನ ಗಂಡನನ್ನು ನೋಡಿಕೊಂಡಿಲ್ಲ ಎಂದು ಸುಳ್ಳಾಗಿ ನಮೂದು ಮಾಡಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ನನ್ನ ಗಂಡನನ್ನು ಎರಡು ತಿಂಗಳುಗಳ ವರೆಗೆ ಮುಂಬೈ ನಗರಕ್ಕೆ ಕರೆದುಕೊಂಡು ಹೋಗಿ ಮರಳಿ ತಂದು ಬಿಟ್ಟಿರುತ್ತಾರೆ. ನನ್ನ ಗಂಡನ ಚಿಕಿತ್ಸೆಗಾಗಿ ವಾದಿಯರು ಕರೆದುಕೊಂಡು ಹೋಗಿದ್ದರು. ವಾದಿಯರೇ ನನ್ನ ಗಂಡನನ್ನು ತಂದು ಮರಳಿ ಬಿಟ್ಟು ಹೋದರು. ನನ್ನ ಗಂಡನನ್ನು ಬಲವಂತವಾಗಿ ಮುಂಬೈ ನಗರಕ್ಕೆ ಕರೆದುಕೊಂಡ ಹೋದ ಬಗ್ಗೆ ನಾನು ಮತ್ತು ನನ್ನ ಗಂಡ ದೂರನ್ನು ಸಲ್ಲಿಸಿದ್ದೇವು. ನಾವು ಈಗ ನಮ್ಮನ್ನು ಪ್ರತಿನಿಧಿಸುವ ವಕೀಲರಿಗೆ ಸದರಿ ದೂರನ್ನು ತಿಳಿಸಿದೇವು. ನಾವು ಪೋಲಿಸರಿಗೆ ದೂರನ್ನು ನೀಡಿಲ್ಲ. ಮುಂಬೈ ನಗರದಲ್ಲಿರುವ ಮನೆಯನ್ನು ಎಷ್ಟು ಹಣಕ್ಕೆ ಮಾರಾಟ ಮಾಡಲಾಗಿದೆ ನನಗೆ ಗೊತ್ತಿಲ್ಲ. ಸದರಿ ಹಣದಲ್ಲಿ ಯಾರು ಎಷ್ಟು ಹಣ ಪಡೆದರು ನನಗೆ ಗೊತ್ತಿಲ್ಲ. ಸದರಿ ಉಯ್ಯಿಲು ಪತ್ರದ ಬಗ್ಗೆ ನನ್ನ ಗಂಡನ ನನಗೆ ತಿಳಿಸಿರುವುದಿಲ್ಲ. ನನ್ನ ಮತ್ತು ನನ್ನ ಗಂಡನ ಸಂಬಂಧ ವಿವಾಹದಿಂದ ನನ್ನ ಗಂಡನ ಮರಣದವರೆಗೆ ಚೆನ್ನಾಗಿ ಇತ್ತು. ನನ್ನ ನಿಖಾಹನಾಮ ನನ್ನ ಬಳಿ ಇದೆ. ದಾವಾ ಸ್ವತ್ತಿನ ಬಗ್ಗೆ ಯಾವುದೇ ಹಣದ ವ್ಯವಹಾರ ಆಗಿರುವುದಿಲ್ಲ. ದಾವಾ ಸ್ವತ್ತಿನ ಪೈಕಿ 2 ಎಕರೆ ಕ್ಷೇತ್ರವನ್ನು ಮಲ್ಲಪ್ಪ ಗಿರೆಪ್ಪ ಬೆಳಮಗಿರವರಿಗೆ

ಮಾರಾಟ ಮಾಡಿದ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಮಲ್ಲಪ್ಪರವರು ದಾವಾ ಸ್ವತ್ತಿನ ಬಾಕಿ ಕ್ಷೇತ್ರವನ್ನು ಕಬಳಿಸುವ ಉದ್ದೇಶದಿಂದ ವಾದಿಯರ ಮೂಲಕ ಪ್ರಸ್ತುತ ದಾವೆ ಸಲ್ಲಿಸಿದ ಬಗ್ಗೆ ನನಗೆ ಗೊತ್ತು. ಸದರಿ ಮಲ್ಲಪ್ಪರವರಿಗೆ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಮಲ್ಲಪ್ಪ ಮತ್ತು ವಾದಿಯರು ಸೇರಿ ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾ ಸ್ವತ್ತಿನ ಸ್ವಾಧೀನವು ವಾದಿಯರ ಬಳಿ ಇದೆ. ದಾವಾ ಸ್ವತ್ತಿನಲ್ಲಿ ವಾದಿಯರಿಗೂ ಮತ್ತು ನನಗೂ ಸಮನಾದ ಹಕ್ಕು ನೀಡಿದರೆ ನನಗೆ ಒಪ್ಪಿಗೆ ಇದೆಯೇ ಎಂದರೆ ಸಾಕ್ಷಿಯು ದಾವಾ ಸ್ವತ್ತು ನನ್ನದು ಎಂದು ನುಡಿಯುತ್ತಾರೆ. ನಾನು ದಾವಾ ಸ್ವತ್ತಿನಲ್ಲಿ ಕಾನೂನಿನಲ್ಲಿ ಲಭ್ಯವಿರುವುದಕ್ಕಿಂತ ಹೆಚ್ಚಿನ ಹಿಸ್ಸೆಗೆ ಅರ್ಹಳಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಪ್ರಭಾರ ಹಿರಿಯ ಸಿವಿಲ್ ನ್ಯಾಯಾಧೀಶರು,
ಆಳಂದ.